# ಕರ್ನಾಟಕ ಸರ್ಕಾರ

# GOVERNMENT OF KARNATAKA

## ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅಂಕಿ–ಅಂಶಗಳ ನೋಟ

## 2009–10

## BANGALORE RURAL DISTRICT AT A GLANCE 2009-10

ಪ್ರಕಟಣೆ:
ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ.
ಬೆಂಗಳೂರು ಗ್ರಾಮಾಂತರ ಜಿಲ್ಲೆ
ಬೆಂಗಳೂರು.

**Published:**
**Office of the District Statistical Officer**
**Bangalore Rural District**
**Bangalore.**


BANGALORE RURAL DISTRICT MAP
DODDABALLAPUR
DEVANHALLI
NELAMANGALA
HOSKOTE
N
W
E
S
0
15
30
kilometres
LEGEND
DISTRICT BOUNDARY
TALUK BOUNDARY

**ಹೆಚ್.ಇ.ರಾಜಶೇಖರಪ್ಪ**
ನಿರ್ದೇಶಕರು
ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ
7ನೇ ಮಹಡಿ, ಬಹುಮಹಡಿಗಳ ಕಟ್ಟಡ, ಕೆ.ಆರ್.ವೃತ್ತ
ಬೆಂಗಳೂರು–560 001.

**ಎನ್.ಪಿ. ಶಂಕರಯ್ಯ**
ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು
ಬೆಂಗಳೂರು ಗ್ರಾಮಾಂತರ ಜಿಲ್ಲೆ
3ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು–560 010.
ದೂರವಾಣಿ: 23355920, 23304745

# ಮುನ್ನುಡಿ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅಂಕಿ ಅಂಶಗಳ ನೋಟವು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಯವರ ಒಂದು ವಾರ್ಷಿಕ ಪ್ರಕಟಣೆಯಾಗಿರುತ್ತದೆ. ಜಿಲ್ಲೆಯಲ್ಲಿನ ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಗಳ ಬಗ್ಗೆ ಉಪಯುಕ್ತ ಅಂಕಿ ಅಂಶಗಳನ್ನೊಳಗೊಂಡಿರುವ 2009–10ರ ಸಂಚಿಕೆಯನ್ನು ಸಾರ್ವಜನಿಕರ ಉಪಯೋಗಕ್ಕೆ ಅನುಕೂಲವಾಗುವಂತೆ ಹಸ್ತ ಪುಸ್ತಕದ ರೂಪದಲ್ಲಿ ಹೊರತರಲಾಗಿದೆ. ಇದರಲ್ಲಿ ಮುಖ್ಯವಾಗಿ ಮಳೆ, ವ್ಯವಸಾಯ, ಕೈಗಾರಿಕೆ, ಪಶು ಸಂಗೋಪನೆ, ಶಿಕ್ಷಣ, ಆರೋಗ್ಯ ಮತ್ತು ಇನ್ನಿತರ ಪ್ರಮುಖ ವಿಷಯಗಳ ಮಾಹಿತಿ ಕೊಡಲಾಗಿದೆ. ಇದರಲ್ಲಿನ ಮಾಹಿತಿಗಳು ಯೋಜನಾಧಿಕಾರಿಗಳಿಗೂ, ಆಡಳಿತಾಧಿಕಾರಿಗಳಿಗೂ ಮತ್ತು ಕೈಗಾರಿಕೋದ್ಯಮಿಗಳಿಗೂ ಹಾಗೂ ಸಂಶೋಧಕರಿಗೂ ಯೋಜನಾಬದ್ಧ ಕಾರ್ಯಕ್ರಮಗಳನ್ನು ರೂಪಿಸಲು ಅನುಕೂಲವಾಗುವುದೆಂದು ಆಶಿಸಲಾಗಿದೆ. ಈ ಪ್ರಕಟಣೆಯಲ್ಲಿನ ಮಾಹಿತಿಯನ್ನು ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಒದಗಿಸಿರುತ್ತಾರೆ. ಇವರೆಲ್ಲರಿಗೂ ನನ್ನ ಕೃತಜ್ಞತೆಗಳು.

ಶ್ರೀ. ಎನ್. ಪಿ. ಶಂಕರಯ್ಯ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಇವರ ಮಾರ್ಗದರ್ಶನದಲ್ಲಿ ಶ್ರೀಮತಿ.ಸುಮತಿ, ಸಹಾಯಕ ಸಾಂಖ್ಯಿಕ ಆಧಿಕಾರಿಯವರು ಹಾಗೂ ಸಿಬ್ಬಂದಿ ವರ್ಗದವರು ತೆಗೆದುಕೊಂಡ ಪರಿಶ್ರಮದ ಕಾರಣ ಈ ಪ್ರಕಟಣೆಯನ್ನು ಸಕಾಲದಲ್ಲಿ ಹೊರತರಲು ಸಾಧ್ಯವಾಗಿದೆ ಎಂದು ತಿಳಿಸಲು ಹರ್ಷಿಸುತ್ತೇನೆ. ಈ ಪುಸ್ತಕದ ಸಂಪಾದನೆಯ ಕಾರ್ಯವನ್ನು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಪ್ರಕಟಣಾ ವಿಭಾಗವು ಕೈಗೊಂಡಿರುತ್ತದೆ. ಇವರೆಲ್ಲರಿಗೂ ನನ್ನ ಅಭಿನಂದನೆಗಳು.

ಈ ಪ್ರಕಟಣೆಯನ್ನು ಉತ್ತಮಗೊಳಿಸುವ ಬಗ್ಗೆ ರಚನಾತ್ಮಕ ಸಲಹೆಗಳಿಗೆ ಸದಾ ಸ್ವಾಗತವಿದೆ ಮತ್ತು ಅಂತಹ ಸಲಹೆಗಳನ್ನು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳಿಗೆ ಕಳುಹಿಸಿಕೊಡಬೇಕೆಂದು ಕೋರಲಾಗಿದೆ.

(ಸಹಿ)

**ಹೆಚ್ .ಇ. ರಾಜಶೇಖರಪ್ಪ**

ನಿರ್ದೇಶಕರು

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ

ಬೆಂಗಳೂರು

ದಿನಾಂಕ:27.01.2011

ಸ್ಥಳ:ಬೆಂಗಳೂರು

# ಪ್ರಸ್ತಾವಿಕ ಮುನ್ನುಡಿ

## ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅಂಕಿ ಅಂಶಗಳ ನೋಟ

2009–10 ನೇ ಸಾಲಿನ ಈ ಹೊತ್ತಿಗೆಯು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಯ ಕಚೇರಿಯ ಒಂದು ವಾರ್ಷಿಕ ಪ್ರಕಟಣೆಯಾಗಿದ್ದು, ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಗಳ ಬಗ್ಗೆ ಉಪಯುಕ್ತವಾದ ಅಂಕಿ ಅಂಶವನ್ನೊಳಗೊಂಡಿದೆ. ಜಿಲ್ಲೆಯ ಪ್ರಮುಖ ಮಾಹಿತಿಯಾದ ಭೌಗೋಳಿಕ ವಿಸ್ತೀರ್ಣ, ಜನಸಂಖ್ಯೆ, ಮಳೆ, ವ್ಯವಸಾಯ, ಪಶುಸಂಗೋಪನೆ, ಮೀನುಗಾರಿಕೆ, ಕೈಗಾರಿಕೆ, ಸಾರಿಗೆ ಮತ್ತು ಸಂಪರ್ಕ, ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಸಹಕಾರ, ನಿಯಂತ್ರಿತ ಮಾರುಕಟ್ಟೆಗಳು, ಬ್ಯಾಂಕುಗಳು ಮತ್ತು ಇನ್ನಿತರ ಮಾಹಿತಿಯ ಬಗ್ಗೆ ಈ ಹೊತ್ತಿಗೆಯಲ್ಲಿ ವಿಶೇಷ ಒತ್ತು ನೀಡಲಾಗಿದೆ. ಈ ಪ್ರಕಟಣೆಯನ್ನು ತಯಾರಿಸಲು ಜಿಲ್ಲೆಯ ವಿವಿಧ ಇಲಾಖೆಗಳಿಂದ ಮಾಹಿತಿಯನ್ನು ಸಂಗ್ರಹಿಸಿ ಕ್ರೋಢೀಕರಿಸಲಾಗಿದೆ ಮತ್ತು ಇದಕ್ಕಾಗಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಯವರಾದ ಶ್ರೀ. ಎನ್. ಪಿ. ಶಂಕರಯ್ಯ ಮತ್ತು ಅವರ ಸಿಬ್ಬಂದಿ ವರ್ಗದವರು ಹೆಚ್ಚಿನ ಪರಿಶ್ರಮ ವಹಿಸಿರುತ್ತಾರೆ.

ಈ ಕಿರುಹೊತ್ತಿಗೆಯನ್ನು ಇನ್ನಷ್ಟು ಸುಧಾರಣೆಗೊಳಿಸಿ ಹೆಚ್ಚು ಉಪಯುಕ್ತಗೊಳಿಸುವತ್ತ ರಚನಾತ್ಮಕ ಸೂಚನೆ ಮತ್ತು ಸಲಹೆಗಳಿಗೆ ಸ್ವಾಗತವಿದೆ. ಈ ಪ್ರಕಟಣೆಯಲ್ಲಿರುವ ಮಾಹಿತಿಯು ಆಡಳಿತಗಾರರು, ಯೋಜನಾಧಿಕಾರಿಗಳು ಮತ್ತು ಸಂಶೋಧಕರ ಉಪಯೋಗಕ್ಕೆ ಅನುಕೂಲವಾಗುವುದೆಂದು ಆಶಿಸುತ್ತೇನೆ.

(ಸಹಿ)

**ಆರ್. ಕೆ. ರಾಜು, ಭಾ.ಆ.ಸೇ.**

ಜಿಲ್ಲಾಧಿಕಾರಿ,

ಬೆಂಗಳೂರು ಗ್ರಾಮಾಂತರ ಜಿಲ್ಲೆ,

ದಿನಾಂಕ: 20.04.2011

ಸ್ಥಳ: ಬೆಂಗಳೂರು

# ಸಂದೇಶ

"2009–10 ನೇ ಸಾಲಿನ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅಂಕಿ ಅಂಶಗಳ ನೋಟವು" ಜಿಲ್ಲಾ ಸಂಖ್ಯಾ ಸಂಗ್ರಹಣಧಿಕಾರಿಯವರ ಕಚೇರಿಯ ಒಂದು ವಾರ್ಷಿಕ ಪ್ರಕಟಣೆಯಾಗಿದೆ. ಇದು ಜಿಲ್ಲೆಯ ಪ್ರಮುಖ ಆರ್ಥಿಕ, ಭೌಗೋಳಿಕ ಮತ್ತು ಅಭಿವೃದ್ದಿ ಚಟುವಟಿಕೆಗಳ ಮಾಹಿತಿಗಳನ್ನೊಳಗೊಂಡ ಒಂದು ಕೈಪಿಡಿ, ಇದನ್ನು ಸಾರ್ವಜನಿಕರ ಉಪಯೋಗಕ್ಕೆ ಆಗುವಂತೆ ಆಂಗ್ಲ ಮತ್ತು ಕನ್ನಡ ಎರಡೂ ಭಾಷೆಗಳಲ್ಲಿ ಮುದ್ರಿಸಿ ಹೊರತರಲಾಗಿದೆ. ಈ ಮಾಹಿತಿಯು ಯೋಜಕರಿಗೆ, ಅಧಿಕಾರಿಗಳಿಗೆ ಮತ್ತು ಕೈಗಾರಿಕೋದ್ಯಮಿಗಳಿಗೂ ಉಪಯಕ್ತವಾಗುವುದೆಂದು ನಿರೀಕ್ಷಿಸಲಾಗಿದೆ. ಈ ಪ್ರಕಟಣೆಯಲ್ಲಿ ಹೆಚ್ಚಿನ ಮಾಹಿತಿಗಳನ್ನು ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳಿಂದ ಪಡೆದು ಕ್ರೋಢೀಕರಿಸಲಾಗಿದೆ. ಇಂತಹ ಪ್ರಕಟಣೆಗಳು ಸಕಾಲದಲ್ಲಿ ಹೊರ ಬಂದು ಇವುಗಳಲ್ಲಿ ಅಡಕವಾದ ಮಾಹಿತಿಗಳು ಎಲ್ಲಾ ಹಂತಗಳಲ್ಲೂ ತಾಳೆ ನೋಡಿದಾಗ ಅವುಗಳು ಸರಿಯಿದ್ದರೆ ಮಾತ್ರ ಇವುಗಳ ಮಹತ್ವ ಇನ್ನೂ ಹೆಚ್ಚಲು ಸಾಧ್ಯ.

ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳಾದ ಶ್ರೀ. ಎನ್. ಪಿ. ಶಂಕರಯ್ಯ ಹಾಗೂ ಅವರ ಸಿಬ್ಬಂದಿ ವರ್ಗದವರು ಈ ಪುಸ್ತಕವನ್ನು ಹೊರತರಲು ತೆಗೆದುಕೊಂಡ ಪರಿಶ್ರಮ ಉಲ್ಲೇಖಾರ್ಹವಾಗಿದೆ.

ಈ ಕಿರುಹೊತ್ತಿಗೆಯನ್ನು ಹೆಚ್ಚು ಉಪಯುಕ್ತಗೊಳಿಸುವತ್ತ ಎಲ್ಲಾ ಅಧಿಕಾರಿಗಳ ರಚನಾತ್ಮಕ ಸಲಹೆ ಮತ್ತು ಸೂಚನೆಗಳು ಲಭ್ಯವಾಗಿ ಮುಂಬರುವ ದಿನಗಳಲ್ಲಿ ಇದು ಜಿಲ್ಲಾ ಅಭಿವೃದ್ಧಿಗೆ ಮಾರ್ಗದರ್ಶಿಯಾಗಲಿ, ಯೋಜಕರಿಗೆ ತಳಮಟ್ಟದಿಂದ ಅಂದರೆ ಗ್ರಾಮ ಮಟ್ಟದಿಂದ ಯೋಜನೆ ತಯಾರಿಸಲು ಉಪಯುಕ್ತವಾಗಲಿ. ಈ ಕೈಪಿಡಿಯು, ಅಗತ್ಯವಿದ್ದವರಿಗೆ ಮೂಲ ಮಾಹಿತಿ ಒದಗಿಸುವಲ್ಲಿ ಫಲಕಾರಿಯಾಗಲಿ ಎಂದು ಆಶಿಸುತ್ತೇನೆ.

(ಸಹಿ)
ಬಿ.ಸಿ.ಚಂದ್ರಶೇಖರ್
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯಿತಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ದಿನಾಂಕ: 15.04.2011
ಸ್ಥಳ: ಬೆಂಗಳೂರು

## ಭಾಗ –2
## ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಾಮಾನ್ಯ ಮಾಹಿತಿ

### ೧. ಸಂಕ್ಷಿಪ್ತ ನೋಟ

ದಿನಾಂಕ 15.8.1986 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯು ಬೆಂಗಳೂರು ಜಿಲ್ಲೆಯಿಂದ ವಿಭಾಗಗೊಂಡಿತು. ಬೆಂಗಳೂರು ಗ್ರಾಮಾಂತರ ಜಿಲ್ಲೆಯು ಕರ್ನಾಟಕ ರಾಜ್ಯದ ಆಗ್ನೇಯ ದಿಕ್ಕಿನಲ್ಲಿದೆ. ಈ ಜಿಲ್ಲೆಯು $12^0$ 15’ ದಿಂದ $13^0$ 35’ ಅಕ್ಷಾಂಶ ಮತ್ತು $77^0$ 05’ ದಿಂದ $78^0$ ರೇಖಾಂಶಗಳ ನಡುವೆ ಇರುತ್ತದೆ, ಭೂಮಿಯ ಮೇಲ್ಮೈ ಸಮುದ್ರ ಮಟ್ಟದಿಂದ 629 ರಿಂದ 950 ಮೀಟರ್ ವ್ಯತ್ಯಾಸದಲ್ಲಿರುತ್ತದೆ. ಈ ಜಿಲ್ಲೆಯ ಉತ್ತರ ದಿಕ್ಕಿನಲ್ಲಿ ಚಿಕ್ಕಬಳ್ಳಾಪುರ ಮತ್ತು ತುಮಕೂರು ಜಿಲ್ಲೆಗಳು, ದಕ್ಷಿಣ ದಿಕ್ಕಿನಲ್ಲಿ ಬೆಂಗಳೂರುನಗರ , ಪೂರ್ವ ದಿಕ್ಕಿನಲ್ಲಿ, ಕೋಲಾರ ಜಿಲ್ಲೆಗಳು ಮತ್ತು ಚಿಕ್ಕಬಳ್ಳಾಪುರ ಮತ್ತು ಪಶ್ಚಿಮ ದಿಕ್ಕಿನಲ್ಲಿ ತುಮಕೂರು ಮತ್ತು ರಾಮನಗರ ಜಿಲ್ಲೆಗಳಿವೆ. ಜಿಲ್ಲೆಯ ಭೂ ವಿಸ್ತಾರವು 5814 ಚ.ಕೀ.ಮೀಗಳಿದ್ದು, ರಾಜ್ಯದ ವಿಸ್ತೀರ್ಣದಲ್ಲಿ ಶೇ 3.02 ರಷ್ಟು ಪ್ರದೇಶವನ್ನು ಹೊಂದಿದ್ದು, ರಾಜ್ಯದಲ್ಲಿ 16ನೇ ಸ್ಥಾನ ಪಡೆದಿದೆ. ಈ ಜಿಲ್ಲೆಯಲ್ಲಿ ಪಿನಾಕಿನಿ ಮತ್ತು ಅರ್ಕಾವತಿ ನದಿಗಳು ಹರಿಯುತ್ತವೆ. ರೇಷ್ಮೆ, ಹಾಲು, ಹೂವು, ತರಕಾರಿ ಮತ್ತು ಕೈಮಗ್ಗದ ಚಟುವಟಿಕೆಗಳಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯು ಪ್ರಸಿದ್ಧವಾಗಿದೆ.

ದೊಡ್ಡಬಳ್ಳಾಪುರ ತಾಲ್ಲೂಕಿನ ಘಾಟಿ ಸುಬ್ರಮಣ್ಯ ಸ್ವಾಮಿ ದೇವಸ್ಥಾನ ಮತ್ತು, ನೆಲಮಂಗಲ ತಾಲ್ಲೂಕಿನಲ್ಲಿರುವ ಶಿವಗಂಗೆ ಬೆಟ್ಟ ,ವಿಜಯ ವಿಠಲ ದೇವಸ್ಥಾನ್ಲ, ಶಿವಗಂಗೆಯು ಕುಮದ್ವತಿ ನದಿಯ ಉಗಮಸ್ಥಾನ. ದೇವನಹಳ್ಳಿ ತಾಲ್ಲೂಕಿನಲ್ಲಿರುವ ಕೋಟೆ, ದೇವನಹಳ್ಳಿಯ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಇವುಗಳು ಪ್ರೇಕ್ಷಣೀಯ ಸ್ಥಳಗಳಾಗಿವೆ.

**2. ಜಿಲ್ಲಾ ಆದಾಯ:**

**ಅ) ಚಾಲ್ತಿ ಬೆಲೆಯಲ್ಲಿ:**

ಜಿಲ್ಲಾ ಆದಾಯವು 2007-08ನೇ ಸಾಲಿನ ಚಾಲ್ತಿ ಬೆಲೆಗಳಲ್ಲಿ ವಿವಿಧ ಬಾಬ್ತುಗಳಿಂದ ಅಂದರೆ ಕೃಷಿ ಮತ್ತು ಪಶುಪಾಲನೆಯಿಂದ 65246 ಲಕ್ಷ ರೂ.ಗಳು, ಅರಣ್ಯದಿಂದ 10312 ಲಕ್ಷ ರೂ.ಗಳು, ಮೀನುಗಾರಿಕೆಯಿಂದ 646 ಲಕ್ಷ ರೂ.ಗಳು, ಗಣಿ ಮತ್ತು ಕಲ್ಲು ಅಗೆತದಿಂದ 14 ಲಕ್ಷ ರೂ.ಗಳು ತಯಾರಿಕೆಯಿಂದ 98144 ಲಕ್ಷ ರೂ.ಗಳು, ನಿರ್ಮಾಣ ಕಾರ್ಯಗಳಿಂದ 40299 ಲಕ್ಷ ರೂ.ಗಳು, ವಿದ್ಯುಚ್ಛಕ್ತಿ, ಅನಿಲ ಮತ್ತು ನೀರು ಸರಬರಾಜಿನಿಂದ 9541 ಲಕ್ಷ ರೂ.ಗಳು, ರೈಲ್ವೆ ಯಿಂದ 5950 ಲಕ್ಷ ರೂ.ಗಳು, ಇತರೆ ರೀತಿಯ ಸಾರಿಗೆಯಿಂದ 25687 ಲಕ್ಷ ರೂ.ಗಳು, ಸಂಪರ್ಕದಿಂದ 5974 ಲಕ್ಷ ರೂ.ಗಳು, ವ್ಯಾಪಾರ, ವಸತಿ ಮತ್ತು ಉಪಹಾರ ಗೃಹಗಳಿಂದ 164756 ಲಕ್ಷ ರೂ.ಗಳು, ಬ್ಯಾಂಕ್ ಮತ್ತು ವಿಮೆ ಉದ್ಯಮದಿಂದ 16845 ಲಕ್ಷ ರೂ.ಗಳು 61278 ಲಕ್ಷ ರೂ., ಸ್ಥಿರಾಸ್ಥಿ ವಾಸಗೃಹಗಳ ಒಡೆತನ ಮತ್ತು ವ್ಯಾಪಾರ ಸೇವೆಗಳಿಂದ 20281ಲಕ್ಷ ರೂ.ಗಳು, ಸಾರ್ವಜನಿಕ ಆಡಳಿತದಿಂದ 40844 ಲಕ್ಷ ರೂ.ಗಳು, ಇತರೆ ಸೇವೆಗಳಿಂದ 36372 ಲಕ್ಷ ರೂ.ಗಳಾಗಿರುತ್ತದೆ ಮತ್ತು ಒಟ್ಟು ಜಿಲ್ಲೆಯ ನಿವ್ವಳ ಆದಾಯ 673645 ಲಕ್ಷ ರೂ.ಗಳಾಗಿದ್ದು, ತಲಾ ಆದಾಯ 33403 ರೂ.ಗಳಾಗಿರುತ್ತದೆ.

**ಆ) ಸ್ಥಿರ ಬೆಲೆಯಲ್ಲಿ –1999–2000:**

ಸ್ಥಿರ ಬೆಲೆಯಲ್ಲಿ ರಾಜ್ಯದ ಒಟ್ಟು ನಿವ್ವಳ ಆದಾಯ 13364779 ಲಕ್ಷ ರೂ.ಗಳಾಗಿದ್ದು, ಜಿಲ್ಲೆಯ ನಿವ್ವಳ ಆದಾಯ 502566 ಲಕ್ಷ ರೂ.ಗಳಾಗಿರುತ್ತದೆ. ಇದು ಸಹ ರಾಜ್ಯದ ನಿವ್ವಳ ಆದಾಯಕ್ಕೆ ಹೋಲಿಸಿದರೆ ಶೇಕಡ 4ರಷ್ಟಾಗಿರುತ್ತದೆ ಮತ್ತು ಜಿಲ್ಲೆಯ ತಲಾ ಆದಾಯ 24920 ಲಕ್ಷ ರೂ.ಗಳಾಗಿರುತ್ತದೆ.

**3**. ಜನಸಂಖ್ಯೆ:

2001ರ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ ಒಟ್ಟು 8,50,968 ಜನಸಂಖ್ಯೆ ಇದ್ದು, 6,58,364 ಗ್ರಾಮೀಣ (ಶೇಕಡಾ.೭೮ ರಷ್ಟು) ಮತ್ತು 1,92,334 ನಗರ (ಶೇಕಡಾ ೨೨ರಷ್ಟು) ಜನಸಂಖ್ಯೆ ಇರುತ್ತದೆ. ಇದರಲ್ಲಿ 4,37,489 ಪುರಷರು ಹಾಗೂ 4,13,479 ಸ್ತ್ರೀಯರು ಇರುತ್ತಾರೆ. ಜಿಲ್ಲೆಯಲ್ಲಿ ಒಟ್ಟು ಜನಸಂಖ್ಯೆಯಲ್ಲಿ 1,86,602 (21.93%) ರಷ್ಟು ಪರಿಶಿಷ್ಠ ಜಾತಿ ಮತ್ತು 43,670 (5.13) ಪರಿಶಿಷ್ಠ ಪಂಗಡದ ಜನಸಂಖ್ಯೆ ಇರುತ್ತಾರೆ.

4. ಸಾಕ್ಷರತೆ ಪ್ರಮಾಣ:

ಜಿಲ್ಲೆಯ ಸಾಕ್ಷರತಾ ಪ್ರಮಾಣವು ಪ್ರತಿಶತ 69.7 ಇದ್ದು, ಇದು ರಾಜ್ಯದ ಪ್ರಮಾಣಕ್ಕಿಂತ 1.04 ಹೆಚ್ಚಾಗಿರುತ್ತದೆ. ರಾಜ್ಯದ ಸಾಕ್ಷರತಾ ಪ್ರಮಾಣವು ಪ್ರತಿ ಶತ 66.60 ಇರುತ್ತದೆ. ಸಾಕ್ಷರತಾ ಪ್ರಮಾಣವು ನಗರ ಪ್ರದೇಶದಲ್ಲಿ ಪ್ರತಿಶತ 77.1 ಇದ್ದರೆ ಗ್ರಾಮೀಣ ಪ್ರದೇಶದಲ್ಲಿ ಪ್ರತಿಶತ 67.3 ಇದ್ದು ಶೇ.9.8 ರಷ್ಟು ಕಡಿಮೆ ಇದೆ. ಜಿಲ್ಲೆಯ ಪುರಷ ಮತ್ತು ಸ್ತ್ರೀಯರ ಸಾಕ್ಷರತಾ ಪ್ರಮಾಣವು ಕ್ರಮವಾಗಿ 79.1 ಮತ್ತು 59.8 ಇದ್ದರೆ, ರಾಜ್ಯದ ಪುರಷ ಹಾಗೂ ಸ್ತ್ರೀಯರ ಪ್ರಮಾಣವು 76.10 ಹಾಗೂ 56.90 ಇರುತ್ತದೆ.

5. ಕೆಲಸಗಾರರ ಸಂಖ್ಯೆ:

2001 ರ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ ಜನಸಂಖ್ಯೆಯ ಶೇಕಡ.೮೪ ರಷ್ಟು ಮುಖ್ಯ ಕೆಲಸಗಾರರು, ಶೇಕಡ.16 ರಷ್ಟು ಅರೇ ಕಾಲಿಕ ಕೆಲಸಗಾರರು, ಶೇಕಡ. 37% ಕೃಷಿ ಸಾಗುವಳಿದಾರರು, ಶೇಕಡ. 21% ಕೃಷಿ ಕಾರ್ಮಿಕರು, ಶೇಕಡ. 5% ಗೃಹಕೃತ್ಯ ಚಟುವಟಿಕೆ ಹಾಗು ಶೇಕಡ. 35% ಇತರೆ ಚಟುವಟಿಕೆಗಳಲ್ಲಿ ಇರುತ್ತಾರೆ

6. ಭೂ ಹಿಡುವಳಿಗಳು:

2005ರ ಕೃಷಿ ಗಣತಿಯ ಪ್ರಕಾರ ಜಿಲ್ಲೆಯಲ್ಲಿ ಒಟ್ಟು 147005 ಲಕ್ಷ ಹಿಡುವಳಿದಾರರಿದ್ದು, 160483 ಹೆಕ್ಟೇರ್ ಗಳಷ್ಟು ಪ್ರದೇಶವನ್ನು ಹೊಂದಿರುವವರಾಗಿರುತ್ತಾರೆ. 97135 ಲಕ್ಷ ಅತಿ ಸಣ್ಣ ಹಿಡುವಳಿದಾರರು 42253 ಭೂಮಿಯನ್ನು ಹೊಂದಿರುವವರಾಗಿರುತ್ತಾರೆ. 29536 ಲಕ್ಷ ಸಣ್ಣ ಹಿಡುವಳಿದಾರರು 41194 ಭೂಮಿಯನ್ನು ಹೊಂದಿದವರಾಗಿರುತ್ತಾರೆ. 14428 ಲಕ್ಷ ಅರೆ ಮಧ್ಯಮ ಹಿಡುವಳಿದಾರರು 38756 ಭೂಮಿಯನ್ನು ಹೊಂದಿದವರಾಗಿರುತ್ತಾರೆ. 5261 ಲಕ್ಷ ಮಧ್ಯಮ ಹಿಡುವಳಿದಾರರು 294611 ಹೆಕ್ಟೇರ್ ಭೂಮಿಯನ್ನು ಹೊಂದಿರುತ್ತಾರೆ. 645 ಲಕ್ಷ ದೊಡ್ಡ ಹಿಡುವಳಿದಾರರಿದ್ದು 8819 ಹೇಕ್ಟೇರ್‌ಗಳಷ್ಟು ಭೂಮಿಯನ್ನು ಹೊಂದಿರುತ್ತಾರೆ.

7. ರಾಸಾಯನಿಕ ಗೊಬ್ಬರಗಳ ವಿತರಣೆ:

ಸಾರಜನಕ, ರಂಜಕ, ಪೊಟ್ಯಾಷ್ ಗೊಬ್ಬರಗಳು ಅನುಕ್ರಮವಾಗಿ 10795, 6569 ಮತ್ತು 4065 ಟನ್ನು 2009-10 ನೇ ಸಾಲಿನಲ್ಲಿ ರೈತರಿಗೆ ಮಾರಾಟವಾಗಿರುತ್ತದೆ

8. ಪಶುಪಾಲನೆ:

ಜಿಲ್ಲೆಯಲ್ಲಿ 8 ಪಶುವೈದ್ಯ ಆಸ್ಪತ್ರೆಗಳು, 37 ಪಶು ಚಿಕಿತ್ಸಾಲಯಗಳು, 27 ಪ್ರಾಥಮಿಕ ಪಶು ವೈದ್ಯ ಕೇಂದ್ರಗಳು, 04 ಸಂಚಾರಿ ಚಿಕಿತ್ಸಾಲಯಗಳು ಮತ್ತು 20 ಕೃತಕ ಗರ್ಭಧಾರಣಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಜಿಲ್ಲೆಯಲ್ಲಿ 2007 ರ ಜಾನುವಾರು ಗಣತಿಯ ಪ್ರಕಾರ 4,73,252 ಜಾನುವಾರುಗಳು ಮತ್ತು 5120991 ಕೋಳಿಗಳಿದ್ದು, 97 ಚಿಕಿತ್ಸಾ ಕೇಂದ್ರಗಳು (ಎಲ್ಲಾ ಸೇರಿ) ಇರುತ್ತವೆ.

**9**. ಯೋಜನೆ:

ಜಿಲ್ಲಾ ಪಂಚಾಯತ್ ಅಸ್ತಿತ್ವಕ್ಕೆ ಬಂದಾಗಿನಿಂದ ಕೇಂದ್ರದಿಂದ ಬರುವಂತಹ ಅನುದಾನದ ಹಣ ರಾಜ್ಯದಿಂದ ಜಿಲ್ಲೆಗೆ ಕೊಡಬೇಕಾದ ಹಣವನ್ನು ಜಿಲ್ಲೆ ಪಂಚಾಯಿತಿ ಮೂಲಕ ಖರ್ಚು ಮಾಡಲಾಗಿತ್ತಿದೆ. ಜಿಲ್ಲಾ ಪಂಚಾಯತಿಯಿಂದ ಇಲಾಖೆಗಳಿಗೆ ಜಿಲ್ಲೆಯಲ್ಲಿನ ಸಂಪನ್ಮೂಲಗಳಿಗನುಸಾರವಾಗಿ ಹಣವನ್ನು ವಿವಿಧ ಇಲಾಖೆಗಳಿಗೆ ಹಂಚಿ ಸರ್ವತೋಮುಖ ಅಭಿವೃದ್ದಿಗೆ ಸಹಕರಿಸಲು ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯತಿ ಜಿಲ್ಲಾ ಕೇಂದ್ರದಲ್ಲಿದ್ದು ಕಾರ್ಯನಿರ್ವಹಿಸುತ್ತಿದೆ. ಇದೂ ಅಲ್ಲದೇ ಆಯಾ ಇಲಾಖೆಗಳಿಗೆ ಜಿಲ್ಲಾ ಪಂಚಾಯತಿ ಮುಖಾಂತರವೂ ಅಲ್ಲದೇ ನೇರವಾಗೂ ಕೂಡ ಅನೇಕ ಕಾರ್ಯಕ್ರಮಗಳಿಗೆ ಹಣವನ್ನು ಬಿಡುಗಡೆ ಮಾಡಲಾಗುತ್ತದೆ. ಆದರೆ ಇದು ಬಹಳ ಕಡಿಮೆ ಪ್ರಮಾಣದಲ್ಲಿರುತ್ತದೆ. ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯತಿ ಅಸ್ತಿತ್ವಕ್ಕೆ ಬಂದ ಮೇಲೆ ನೀರಾವರಿ ಹಾಗೂ ಗ್ರಾಮೀಣ ಮಟ್ಟದಲ್ಲಿ ಸಮಾಜ ಸುಧಾರಣೆ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ಆಂತರಿಕ ಉಪಯೋಗವುಳ್ಳ ಯೋಜನೆಗಳಿಗೆ ವಿವಿಧ ಇಲಾಖೆಯಲ್ಲಿ ಆಧ್ಯತೆಯನ್ನು ನೀಡಲಾಗಿದೆ. ಈ ಸಾಲಿನಲ್ಲಿ ಒಟ್ಟಾರೆ ವಿವಿಧ ಯೋಜನೆಗಳಿಗಾಗಿ 7619.27 ಲಕ್ಷ ರೂ.ಗಳನ್ನು ವಿವಿಧ ಇಲಾಖೆಗಳ ಮುಖಾಂತರ ವಿವಿಧ ಯೋಜನೆಗಳಿಗಾಗಿ 6359.84ವಿನಿಯೀಗಿಸಲಾಗಿದೆ. ಜಿಲ್ಲಾ ವಲಯ ಯೋಜನೆಯಲ್ಲಿ ವಿವಿಧ ಇಲಾಖೆಗಳಲ್ಲಿನ ವೆಚ್ಚಗಳನ್ನು ಪರಿಶೀಲಿಸಿದರೆ, ಶಿಕ್ಷಣಕ್ಕೆ 1387.00 ಲಕ್ಷ ರೂ.(ಶೇ.95), ಮಹಿಳಾ ಮತ್ತು ಮಕ್ಕಳ ಅಭಿವೃದ್ದಿಗೆ 643.15 ಲಕ್ಷ ರೂ.(ಶೇ100), ಗ್ರಾಮೀಣ ಅಭಿವೃದ್ದಿಗೆ 59.24 ಲಕ್ಷ ರೂ.(ಶೇ.100), ಕುಟುಂಬ ಕಲ್ಯಾಣಕ್ಕೆ 453.84ಲಕ್ಷ ರೂ. (ಶೇ.93), ಸಮಾಜ ಕಲ್ಯಾಣಕ್ಕೆ 223.37 ಲಕ್ಷ ರೂ.(ಶೇ.83), ರಸ್ತೆ ಮತ್ತು ಸೇತುವೆಗಳಿಗೆ 199.16ಲಕ್ಷ ರೂ.(ಶೇ.100), ಗಿರಿಜನ ಉಪಯೋಜನೆಗೆ 18.00 ಲಕ್ಷ ರೂ.(ಶೇ.100) ರಷ್ಟು ಖರ್ಚು ಮಾಡಲಾಗಿದೆ.